ಪಿ.ಡಬ್ಲ್ಯೂ ಃ **2**

ಸಾಕ್ಷಿಗೆ ದಿನಾಂಕಃ **08.01.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು **: 2** ನೇ ಎದುರುದಾರರ ಪರ**:** ವಕೀಲರ ಮೂಲಕ ಃ

ನಾನು ಮರಗೆಲಸ ಮಾಡುತ್ತೇನೆ. ಮೃತ ವ್ಯಕ್ತಿಯು ನನಗೆ **3-4** ವರ್ಷಗಳಿಂದ ಪರಿಚಯವಿದ್ದರು. ನಾನು ಹಲಗೂರಿನಿಂದ ಊರಿಗೆ ಹೋಗುವಾಗ ಅಪಘಾತವನ್ನು ನೋಡಿರುತ್ತೇನೆ. ಮೃತ ವ್ಯಕ್ತಿ ಬೈಕ್ ಚಾಲನೆ ಮಾಡುವುದನ್ನು ನಾನು ನೋಡಿರುತ್ತೇನೆ. ಅವರು ಹಲಗೂರಿನಿಂದ ಊರಿಗೆ ಹೋಗುತ್ತಿದ್ದರು. ನಾನು ಇದ್ದ ಸ್ಥಳದಿಂದ ಫುಟ್‌ಪಾತ್‌ನಲ್ಲಿ ಗೂಡ್ಸ್ ವಾಹನ ನಿಂತಿದ್ದ ಸ್ಥಳಕ್ಕೆ **50** ಅಡಿ ಅಂತರ ಇತ್ತು. ನಾನು ಗೂಡ್ಸ್ ವಾಹನದ ಹಿಂದೆ ಬೈಕ್‌ನಲ್ಲಿ ಹೋಗುತ್ತಿದ್ದೆ. ಮೃತನ ಬೈಕ್ ಮತ್ತು ನಮ್ಮ ಬೈಕ್‌ನ ನಡುವೆ ಸುಮಾರು **20** ಅಡಿಗಳ ಅಂತರ ಇತ್ತು. ಗೂಡ್ಸ್ ವಾಹನ ರಸ್ತೆಯಿಂದ ಪಕ್ಕದಲ್ಲಿ ಫುಟ್‌ಪಾತ್ ಕಡೆಗೆ ನಿಂತಿತ್ತು ಎಂದರೆ ರಸ್ತೆಯ ಮಧ್ಯ ಭಾಗದಲ್ಲಿ ನಿಂತಿತ್ತು. ಸದರಿ ಗೂಡ್ಸ್ ವಾಹನ ಬಿಳಿ ಬಣ್ಣದಿಂದ ಕೂಡಿತ್ತು. ನಾನು ಅಪಘಾತದ ಸಂಬಂಧವಾಗಿ ಪೊಲೀಸರಿಗೆ ದೂರು ನೀಡಿರುವುದಿಲ್ಲ. ನಾನು ಸ್ಥಳ ಮಹಜರ್‌ಗೆ ಸಹಿ ಮಾಡಿರುತ್ತೇನೆ. ನಾನು ಪೊಲೀಸ್ ಠಾಣೆಯಲ್ಲಿ ಮಹಜರ್‌ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯು ನನಗೆ ಪರಿಚಯಸ್ಥರಾದ ಕಾರಣ ಗೂಡ್ಸ್ ವಾಹನವು ರಸ್ತೆಯ ಮದ್ಯದಲ್ಲಿ ನಿಂತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.